ವಹಿಸಿಕೊಡಲಾಗಿದೆ. ಈ ಪೈಕಿ ಕೆಲವು ಏಜೆನ್ಸಿಗಳವರು ತಮಗೆ ನಿಗದಿಪಡಿಸಿರುವ ದರದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಸತಾಯಿಸುತ್ತಿದ್ದಾರೆ. ಒಂದು ಸಲ ಏಜೆನ್ಸಿಗೆ ಕೆಲಸವನ್ನು ವಹಿಸಿದ ನಂತರ ಮಧ್ಯದಲ್ಲಿ ದರವನ್ನು ಏರಿಸುವುದಕ್ಕಾಗುವುದಿಲ್ಲ. ಈ ಬಗ್ಗೆ ಅವರಿಗೆ ಅಂತಿಮ ಎಚ್ಚರಿಕೆ ನೀಡಿದ್ದು, ಈ ತಿಂಗಳ ಅಂತ್ಯದೊಳಗೆ ಗುರಿಯನ್ನು ಮುಟ್ಟುತ್ತೇವೆ.

ಶ್ರೀ ಜಿ. ಎನ್. ಬಚ್ಚೇಗೌಡ : ಕೋಲಾರ, ತುಮಕೂರು ಭಾಗಗಳಲ್ಲಿ 350 ಅಡಿಗಳವರೆಗೆ ಕೊಳವೆಬಾಕಿ ಕೊರೆದರೆ ನೀರು ನಿಗುವುದಿಲ್ಲ. ಅಂತರ್ಜಲ ತುಂಬಾ ಕೆಳಮಟ್ಟಕ್ಕಿಳಿದಿರುವುದರಿಂದ ನೀರು ಲಭ್ಯವಾಗುವವರೆಗೂ ಕೊರೆಸುವ ವ್ಯವಸ್ಥೆಯಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ವೈಯಬಲ್ ಯುನಿಟ್ ಎಂದು ಮಾಡುತ್ತೇವೆ. ಸಾಮೂಹಿಕ ನೀರಾವರಿ ಯೋಜನೆಯಡಿ ಎರಡರಿಂದ ಮೂರು ಪಾಯಿಂಟ್‌ಗಳಲ್ಲಿ ಬೋರ್ ಕೊರೆಸಬಹುದು. ಕೊರೆಸಿದ ಎರಡೂ ಪಾಯಿಂಟ್‌ಗಳಲ್ಲೂ ಸಾಕಷ್ಟು ನೀರು ಬರದಿದ್ದರೆ ಮತ್ತೊಂದು ಪಾಯಿಂಟ್‌ನಲ್ಲಿ ಕೊರೆಸಬಹುದು. ಇಲ್ಲವೇ ಒಂದು ಪಾಯಿಂಟ್‌ನಲ್ಲಿ ಕೊರೆಸಿದ್ದು ವಿಫಲವಾದರೆ ಮತ್ತೊಂದು ಪಾಯಿಂಟ್‌ನಲ್ಲಿ ಕೊರೆಸಬಹುದು. ಕೊರೆಸಿದ ನಂತರವೂ ಅಕಸ್ಮಾತ್ ನೀರು ಬಾರದಿದ್ದರೆ ಸುಮಾರು 65 ಸಾವಿರ ರೂಪಾಯಿಗಳನ್ನು ಯುನಿಟ್ ಕಾಸ್ಟ್ ಎಂದು ಏನು ನಿಗದಿಪಡಿಸಿದ್ದೇವೆ, ಇದು ವರ್ಕ್‌ಔಟ್ ಆಗದಿದ್ದರೆ ಯುನಿಟ್‌ಗೆ ಇನ್ನೂ ಹತ್ತು ಸಾವಿರ ರೂಪಾಯಿಗಳು ಜಾಸ್ತಿಯಾಗುವುದಾದರೆ ಇನ್ನೂ ಆಳಕ್ಕೆ ಕೊರೆಸಲು ಕ್ರಮ ಕೈಗೊಳ್ಳುತ್ತೇವೆ. ಇಲ್ಲಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಇದರಲ್ಲಿ ಸಾಮಾಜಿಕ ಸ್ಥಿತಿ-ಗತಿಗಳನ್ನು ಅಳತೆ ಮಾಡತಕ್ಕಂಥ ಸನ್ನಿವೇಶವಿದೆ. ಇದರಲ್ಲಿ ನಾವು ನಿಮ್ಮನ್ನು (ಶಾಸಕರನ್ನು) ಅಧ್ಯಕ್ಷರನ್ನಾಗಿ ಮಾಡಿರುವಂಥ ಸಂದರ್ಭದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದು ಸಾಧ್ಯವಿದ್ದರೆ ಯುನಿಟ್‌ಗೆ ಹೋಗಿ ಪರಿಶೀಲಿಸಿ ಬರಬೇಕು, ಇಲ್ಲದಿದ್ದರೆ ನಿಮ್ಮ ಪರವಾಗಿ ಯಾರನ್ನಾದರೂ ಯನಿಟ್ ಹತ್ತಿರ ಕಳುಹಿಸಿ ಇನ್ಸ್‌ಪೆಕ್ಷನ್ ಮಾಡಿ ಕೆಲಸ ಹೇಗೆ? ನಡೆಯುತ್ತಿದೆ? ಯಂತ್ರಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ? ಎಂಬುದನ್ನೆಲ್ಲಾ ಪರಿಶೀಲಿಸಿ ವರದಿ ಮಾಡಬೇಕೆಂದು ತಿಳಿಸಿದ್ದರೂ ಒಬ್ಬಿಬ್ಬರನ್ನು ಹೊರತುಪಡಿಸಿದರೆ ಮತ್ತ್ಯಾರೂ ಕೂಡ ನನಗೆ ವರದಿ ಮಾಡಿರುವುದಿಲ್ಲ. ಇದರ ಬಗ್ಗೆ ಮುಂದೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಹಿಂದುಳಿದ ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ವರ್ಗದವರಿದ್ದು ಆ ಜಿಲ್ಲೆಗೆ ಹೆಚ್ಚಿಗೆ ಗುರಿ ಹಾಗೂ ಹಣ ಕೊಡಬೇಕೆಂಬ ಆಸೆ ಇಟ್ಟುಕೊಂಡಿದ್ದು ಆ ದಿಸೆಯಲ್ಲಿ ಕಾರ್ಯಪ್ರವೃತ್ತನಾಗುತ್ತೇನೆ.

ಹುಣಸೂರು ಪಟ್ಟಣಕ್ಕೆ ನೀರು ಸರಬರಾಜು ಯೋಜನೆ

102 (1188) ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಪಟ್ಟಣಕ್ಕೆ ಕುಡಿಯುವ ನೀರಿಗಾಗಿ ಕೆ. ಆರ್. ನಗರದಿಂದ ಕಾವೇರಿ ನೀರನ್ನು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ : (ಮುಖ್ಯಮಂತ್ರಿಯವರು)

ಅ) ಪರಿಶೀಲನೆಯಲ್ಲಿದೆ

ಆ) ಉದ್ಭವಿಸುವುದಿಲ್ಲ.

ಶ್ರೀ ವಿ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ 'ಪರಿಶೀಲನೆಯಲ್ಲಿದೆ' ಎಂದು ಉತ್ತರವನ್ನು ಕಟ್ಟಿದ್ದಾರೆ, ಯಾವಾಗ ಪ್ರಾರಂಭಿಸಲಾಗುವುದು ಎಂಬ ಪ್ರಶ್ನೆಗೆ 'ಉದ್ಭವಿಸುವುದಿಲ್ಲ'ವೆಂದು ಉತ್ತರವನ್ನು ಕೊಟ್ಟಿದ್ದಾರೆ. ಹೋದ ಏಪ್ರಿಲ್‌ನ ಅಧಿವೇಶನದಲ್ಲಿ ಹುಣಸೂರು ಪಟ್ಟಣಕ್ಕೆ ಒದಗಿಸುತ್ತಿರುವ ಲಕ್ಷ್ಮಣ ತೀರ್ಥ ನದಿಯ ನೀರು ಕುಡಿಯಲು ಯೋಗ್ಯವಲ್ಲವೆಂದು ವರದಿ ಕೊಟ್ಟಿದ್ದಾರೆ. ಅದಕ್ಕೆ ಪರ್ಯಾಯವಾಗಿ ಕೆ.ಆರ್. ನಗರದಿಂದ ನೀರನ್ನು ಒದಗಿಸುವ ಯೋಜನೆ ಹತ್ತು ವರ್ಷಗಳಿಂದ ಸರ್ಕಾರದ ಮುಂದಿದೆ. ಅದಕ್ಕೆ ಪುರಸಭೆಯವರು ಒಪ್ಪಿಗೆ ಕೊಟ್ಟಿಲ್ಲವೆಂದು ಮಾನ್ಯ ಸಚಿವರು ಸದನದಲ್ಲಿ ಹೇಳಿದ್ದರು. ಮಾನ್ಯ ಸಚಿವರು ಅದಕ್ಕೆ ಒಪ್ಪಿಗೆ ಕೊಟ್ಟು ಆ ಯೋಜನೆಗೆ ಮಂಜೂರಾತಿ ಕೊಡಿಸಬೇಕತಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಲಕ್ಷ್ಮಣತೀರ್ಥದಿಂದ ಆ ಪಟ್ಟಣಕ್ಕೆ ಈಗಾಗಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಅದು ಅಷ್ಟೊಂದು ಸಮರ್ಪಕವಾಗಿಲ್ಲ ಮತ್ತು ಸಮರ್ಪಕವಾಗಿ ನೀರನ್ನು ಒದಗಿಸಲು ಆಗಿಲ್ಲವೆಂಬುದನ್ನು ಒಪ್ಪಿಕೊಂಡು ಇದಕ್ಕೆ ಸುಮಾರು 18 ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಅದರಲ್ಲಿ ಎಂಬು ಹಳ್ಳಿಗಳನ್ನು ಹೊಸದಾಗಿ ಸೇರಿಸಿಕೊಂಡಿದ್ದೇವೆ. ಅದಕ್ಕೆ ಮುನಿಸಿಪಾಲಿಟಿಯಿಂದ ಕಳೆದ ತಿಂಗಳು ರೆಸಲ್ಯೂಷನ್ ಸಹ ಬಂದಿದೆ ಆ ಎಂಟು ಹಳ್ಳಿಗಳಿಂದ ವಂತಿಕೆ ಬರಬೇಕಾಗುತ್ತದೆ. ಆರ್.ಡಿ.ಪಿ.ಆರ್. ಇಲಾಖೆಯಿಂದ ಎಂಟು ಕೋಟಿರೂಗಳ ಹಣವನ್ನು ಕಟ್ಟಬೇಕಾಗುತ್ತದೆ. ನಮ್ಮ ಇಲಾಖೆಯಿಂದ ಇದನ್ನು ಅಧ್ಯಕ್ಷತೆಯ ಮೇರೆಗೆ ಮುಂದಿನ ವರ್ಷ ತೆಗೆದುಕೊಳ್ಳಬೇಕೆಂದು ಯೋಚಿಸಿದ್ದೇವೆ.

ಶ್ರೀ ವಿ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ಇವತ್ತು ಉದ್ದೇಶಪೂರ್ವಕವಾಗಿ ಎಂಟು ಹಳ್ಳಿಗಳನ್ನು ಸೇರಿಸಿಕೊಂಡು ಈ ಯೋಜನೆಯನ್ನು ತಡ ಮಾಡುವ ವ್ಯವಸ್ಥೆಯಾಗುತ್ತಿದೆ. ಇವರೇನು ಎಂಟು ಹಳ್ಳಿಗಳನ್ನು ಸೇರಿಸಿಕೊಂಡಿದ್ದಾರೆ ಅಲ್ಲಿ ಈಗಾಗಲೇ ಜನರು ನೀರನ್ನು ಕುಡಿಯುತ್ತಿದ್ದಾರೆ. ಲಕ್ಷ್ಮಣತೀರ್ಥ ನೀರು ಕುಡಿಯಲು ಯೋಗ್ಯವಲ್ಲವೆಂದು ಸರ್ಕಾರ ವರದಿಯೇ ಇದೆ. ಆದರೆ ಹುಣಸೂರಿಗೆ ನೀರನ್ನು ಕೊಡಬೇಕಾದರೆ ದಾಯಲ್ಲಿ ಬರುವ ಎಂಟು ಹಳ್ಳಿಗಳನ್ನೂ ಸೇರಿಸಿಕೊಂಡು ಉದ್ದೇಶಪೂರ್ವಕವಾಗಿ ಯೋಜನೆ ತಡವಾಗುವಂತೆ ಮಾಡುತ್ತಿದ್ದಾರೆ. ಆ ಎಂಟ್ ಹಳ್ಳಿಗಳಲ್ಲಿ ನೀರಿನ ಟಾಂಕ್ ಇದೆ. ನೀರು ಇದೆ. ದಿವಂಗತ ದೇವರಾಜು ಅರಸುರವರು ಕುಡಿಯುವ ನೀರಿನ ಈ ಯೋಜನತಯ ಕನಸೇನಿತು ಅದನ್ನು ನನ್ನು ಮಾಡಿಕೊಡಬೇಕಾಗಿ ಕೇಳಿಕೊಳ್ಳತ್ತೇನೆ. ದಯಮಾಡಿ ಆರ್.ಡಿ.ಪಿ.ಆರ್ : ಅನ್ನು ಇದರ ಜೊತೆಗೆ ಸೇತಿಸಬೇಡಿ ಹಾಗಾದರೆ ಇನ್ನೂ ಹತ್ತು ವರ್ಷಗಳಾದರೂ ಆ ಯೋಜನೆ ಮುಗಿಯುವುದಿಲ್ಲ. ಮಾನ್ಯ ಸಚಿವರು ಹುಣಸೂರಿಗೆ ಬಂದಿದ್ದಾಗ ಇದನ್ನು ನೋಡಿ ಮಾಡುವ ಭರವಸೆಯನ್ನೂ ಕೊಟ್ಟಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ನಾವು ಯೋಜನೆಯಂತೂ ಸಿದ್ಧಮಾಡಿಬಿಟ್ಟಿದ್ದೇವೆ. ಆರ್.ಡಿ.ಪಿ.ಆರ್.ನಿಂದ ವಂತಿಗೆಯ ಹಣವನ್ನು ತರಿಸಬೇಕಾಗಿದೆ. ಆ ಯೋಜನೆಯನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಸೇರಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರಕ್ಕೆ ಸಹಿ ಮಾಡುವಾಗ ಇದನ್ನು ನೋಡಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ. ಮೊದಲನೆಯ ಪ್ರಶ್ನೆಯಾದ ಹುಣಸೂರು ಪಟ್ಟಣಕ್ಕೆ ಕುಡಿಯುವ ನೀರಿಗಾಗಿ ಕೆ.ಆರ್. ನಗರದಿಂದ ಕಾವೇರಿ ನೀರನ್ನು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ ಎಂಬುದಕ್ಕೆ ಪರಿಶೀಲನೆಯಲ್ಲಿದೆಯೆಂದು ಉತ್ತರ ನೀಡಿದ್ದಿರಿ. ಪರಿಶೀಲನೆಯಲ್ಲಿದೆ ಎಂದರೆ it is under consideration ಎಂದಾಗುತ್ತದೆ. ಎರಡನೆಯ ಪ್ರಶ್ನೆಗೆ ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ಎಂಬುದಕ್ಕೆ ಉದ್ಭವಿಸುವುದಿಲ್ಲವೆಂದು ಉತ್ತರ ನೀಡಿದ್ದಾರೆ. 'ಪರಿಶೀಲನೆಯಲ್ಲಿರುವಾಗೆ' ಉದ್ಭವಿಸುವುದಿಲ್ಲವೆಂದು ಹೇಗೆ ಉತ್ತರವನ್ನು ಕೊಡುತ್ತೀರಿ? ತಾವು ನೋಡದೆಯೇ ಉತ್ತರಕ್ಕೆ ಸಹಿ ಮಾಡಿದ್ದೀರಾ? ಇದರ ಅರ್ಥವೇನೆಂದು ಹೇಳಬೇಕು.

ಅಧ್ಯಕ್ಷರು : ಇನ್ನು ಮುಂದೆ ಇದನ್ನು ಸರಿಪಡಿಸಿಕೊಳ್ಳಿ. ಏನೋ ಬೈ ಮಿಸ್ಟೇಕ್ ಹಾಗಾಗಿದೆ. ಮುಂದೆ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಈ ರೀತಿಯಾಗುವುದನ್ನು ಸರಿಪಡಿಸಿಕೊಳ್ಳಲು ತಮ್ಮ ಕಾರ್ಯದರ್ಶಿಯವರಿಗೆ ದಯಮಾಡಿ ಹೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ : ಎಷ್ಟು ಯಾಂತ್ರಿಕವಾಗಿ ಉತ್ತರವನ್ನು ಕೊಡುತ್ತಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಲ್ಲಿದೆಯೆಂದು ಹೇಳಬೇಕಾಗುತ್ತದೆ. ಏಕೆಂದರೆ ಆ ಯೋಜನೆ ಇನ್ನೂ ಪೂರ್ಣವಾಗಿ ಸ್ಕ್ಯಾಂಕ್ಷನ್ ಆಗಿಲ್ಲ. ಎಂಟು ಹಳ್ಳಿಗಳನ್ನು ಸೇರಿಸಿಕೊಂಡು ಆರ್.ಡಿ.ಪಿ.ಆರ್. ಇಲಾಖೆಯಿಂದ ವಂತಿಗೆಯ ಹಣವನ್ನು ತರಿಸಬೇಕು. ಹುಡ್ಕೋದಿಂದ ಹಣದ ವ್ಯವಸ್ಥೆಯನ್ನೂ ಮಾಡಬೇಕಾಗುತ್ತದೆ. ಈ ಹಂತದಲ್ಲಿ ಯೋಜನೆ ಇರುವಾಗ 'ಪರಿಶೀಲನೆ' ಯಲ್ಲಿರುವುದು ಎಂದು ಹೇಳುವುದತೇ ಸೂಕ್ತ. ಒಟ್ಟಿನಲ್ಲಿ ಹುಣಸೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯಾಗಬೇಕು.

ಅಧ್ಯಕ್ಷರು : ತಾಂತ್ರಿಕ ತಪ್ಪುಗಳ ಬಗ್ಗೆ ಚರ್ಚೆ ಬೇಡ, ನಮಗೆ ಸಮಯವಿಲ್ಲ, ಇನ್ನೂ ಮೂರು ಪ್ರಶ್ನೆಗಳು ಬಾಕಿ ಇದೆ.

ಶ್ರೀ ಪಿ.ಪಾಪಣ್ಣ : ಈ ಯೋಜನೆ ತಡ ಮಾಡಲು ಏನೇನೋ ಕಾರಣವನ್ನು ಕೊಟ್ಟುಕೊಂಡು ಕಳುಹಿಸುತ್ತಿದ್ದಾರೆ. ಲಕ್ಷ್ಮಣತೀರ್ಥ ನೀರು ಕುಡಿಯಲು ಯೋಗ್ಯವಲ್ಲವೆಂದು ಸರ್ಕಾರದಿಂದ ವರದಿಯನ್ನು ಕೊಟ್ಟಿದ್ದಾರೆ. ನೀರಿಗಾಗಿ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ, ಬೋರ್‌ವೆಲ್‌ಗಳಲ್ಲಿ ಈ ತಿಂಗಳು ನೀರು ಇದ್ದರೆ ಮುಂದಿನ ತಿಂಗಳು ಇರುವುದಿಲ್ಲ. ಬೋರ್‌ವೆಲ್‌ಗಳು ಬತ್ತಿಹೋಗುತ್ತಿವೆ. ಕುಡಿಯುವ ನೀರಿಗೆ ಜನರು ಏನು ಮಾಡಬೇಕು? ಮಾನ್ಯ ಸಚಿವರು ಅಲ್ಲಿಗೆ ಬಂದಿದ್ದಾಗ ಖಂಡಿತಾ ಮಾಡುವುದಾಗಿ ಭರವಸೆ ನೀಡಿದ್ದಾರೆ, ಆದರೆ ಈಗ ಹಾರಿಕೆಯ ಉತ್ತರ ನೀಡಿದರೆ ಹೇಗೆ? ದಯಮಾಡಿ ಅದನ್ನು ಮಾಡಿಕೊಡುವ ಭರವಸೆಯನ್ನು ಸಚಿವರು ಕೊಡಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಪರಿಶೀಲನೆ ಮಾಡುತ್ತೇನೆ.